"ಓ... ನೀರು ತುಂಬಿಸಿ ಆಗಲೆ ತಾಸಾಯಿತು."

"ಲಕ್ಷ್ಮಮ್ಮಾ, ಸೋಡಾ ಸೀಸೆಗಳೆಲ್ಲಾ ತೊಳೆದು ಸ್ವಚ್ಛ ಮಾಡಿದ್ದಿಯೋ?'' ಅಂದರೆ,

"ಓ... ಅದೆಲ್ಲಾ ಕೆಲಸ ಮುಗಿದು ಬಹಳ ಹೊತ್ತಾಯ್ತು."

ಒಮ್ಮೆ ಕೂದಲು ಸುತ್ತಿ ತುರುಬು ಕಟ್ಟಿ ಕೆಲಸಕ್ಕೆ ಇಳಿದಳೆಂದರೆ, ಮನೆಕೆಲಸ, ಅಂಗಡಿಯ ಕೆಲಸ ಎಲ್ಲಾ ಮುಗಿದನಂತರವಷ್ಟೇ ಅವಳು ಕೂರುವುದು.

ಅವಳು ಈ ಪರಿ ಕೆಲಸದಲ್ಲಿರುವುದು ನೋಡಿದ ಚಂದ್ರಣ್ಣ ಮನೆಗೇ ಗ್ಯಾಸ್ ಸಿಲಿಂಡರ್ ತಂದು, ಸೋಡಾ ಬಾಟಲಿಯಲ್ಲಿ ಗ್ಯಾಸ್ ತುಂಬುವುದನ್ನು ಕಲಿಸಿದ. ಈ ರೀತಿ ಹೆಂಗಸೊಬ್ಬಳು ಸೋಡಾ ಸೀಸೆಗೆ ಗ್ಯಾಸ್ ತುಂಬುವುದು ಆಗಿನ ಕಾಲದಲ್ಲಿ ಒಂದು ಸೋಜಿಗವೇ. ಊರವರು ಮನೆಕಡೆ ಕುತೂಹಲದಿಂದ ನೋಡುತ್ತಿದ್ದರೂ ಅದೇನನ್ನೂ ಲೆಕ್ಕಕ್ಕಿಡದೆ ತನ್ನ ಪಾಡಿಗೆ ತಾನು ಕೆಲಸ ಮಾಡಿಕೊಂಡಿದ್ದಳು.

ಬರಬರುತ್ತಾ "ಪೆಂಡೆಂ ಸೋಡಾ ಸೆಂಟರ್" ಸ್ವಾತಂತ್ರ್ಯ ಹೋರಾಟಗಾರರು ಸೇರುವ ಅಡ್ಡೆಯಾಗಿಬಿಟ್ಟಿತು. ಅಲ್ಲೇ ಹೋರಾಟದ ಬಗ್ಗೆ ಮಾತು ಹಾಗೂ ಸೋಡಾ ಎರಡೂ ಜೋರಾಗಿ ಸದ್ದು ಮಾಡ್ತಿದ್ದವು. ಇವರ ಸಲುವಾಗಿ "ಆಂಧ್ರ ಪತ್ರಿಕೆ" ದಿನಪತ್ರಿಕೆಗೆ ಆಜೀವ ಸದಸ್ಯತ್ವ ಕಳುಹಿಸಲಾಯಿತು. ನೆಲ್ಲೂರಿನಲ್ಲಿ ನಡೆಯುವ ಕಾಂಗ್ರೆಸ್ ಸಭೆಗಳಿಗೆ, ಹೋರಾಟಗಳಿಗೆ ಇಲ್ಲಿಂದ ನೀಡಬೇಕಾದ ಸಹಕಾರದ ಬಗ್ಗೆ ಅಲ್ಲೇ ಚರ್ಚೆಯಾಗುತ್ತಿತ್ತು.

ಆದರೆ ಇದಕ್ಕೆಲ್ಲ ಬೇಕಾದ ಹಣ ಇವರ್‍ಯಾರ ಹತ್ತಿರ ಇರಲಿಲ್ಲ. ಇವರಿಗೇನಾದರೂ ಸಹಾಯ ಮಾಡಿದರೆ ಒಳ್ಳೆಯದಲ್ಲವೇ ಅಂದುಕೊಂಡ ಚಂದ್ರಣ್ಣ. ಅದಕ್ಕಾಗಿ ಈಗಿರುವ ವ್ಯಾಪಾರ ಬೆಳೆಸಬೇಕು... ಹೇಗೆ? ಎಂದು ಯೋಚಿಸತೊಡಗಿದ.

"ನೀನೇ ಹೊಸದಾಗಿ ಏನಾದರೂ ಯೋಚನೆ ಮಾಡು. ಕೇವಲ ಒಂದೇ ತೆರನಾದ ಸೋಡಾವನ್ನು ಮಾರುತ್ತಿದ್ದರೆ ವ್ಯಾಪಾರ ಬೆಳೆಯುವುದಾದರೂ ಹೇಗೆ?" ಅಂದಳು ಲಕ್ಷ್ಮಮ್ಮ.

ಆಗ ಗಂಡಹೆಂಡಿರಿಬ್ಬರೂ ಪ್ರಯತ್ನಿಸಿ, ಹೊಸ ಪಾನೀಯ ಒಂದನ್ನು ತಯಾರಿಸಿದರು. ಅದಕ್ಕೆ "ಸುಗಂಧ ಹಾಲು" ಅಂತ ಹೆಸರಿಟ್ಟರು. ಇದನ್ನು ಕೂಡ ಇಷ್ಟಪಟ್ಟ ಕಾವಲಿಯ ಜನ "ಪೆಂಡೆಂ ಸುಗಂಧಿ" ಅಂತ ಪ್ರೀತಿಯಿಂದ ಕರೆದರು. ವಟ್ಟಿವೇರು ಬೇರಿನಿಂದ ಈ ಪಾನೀಯವನ್ನು ತಯಾರಿಸುತ್ತಿದ್ದರು. ಇದು ಚಂದ್ರಣ್ಣ ತಾನೇ ಮೊಟ್ಟಮೊದಲಿಗೆ ಕಂಡುಹಿಡಿಯಲಿಲ್ಲವಾದರೂ ಆಗ ನೆಲ್ಲೂರು ಸೀಮೆಯಲ್ಲಿ ಎಲ್ಲೋ ಒಂದೆರಡು ಕಡೆಗಳಲ್ಲಿ ಸಿಗುತ್ತಿದ್ದ ಈ ಪಾನೀಯವನ್ನು ಕಾವಲಿಗೆ ಪರಿಚಯಿಸಿದ್ದು ಮಾತ್ರ ಚಂದ್ರಣ್ಣನೇ. ಕಾಡುಮೇಡು ಅಲೆಯುವ ಜನರಿಂದ ಪ್ರತಿದಿನ ಈ ಬೇರುಗಳನ್ನು ತರಿಸುತ್ತಿದ್ದ. ಅದನ್ನು ಎರಡು ದಿನ ನೀರಲ್ಲಿ ನೆನೆಸಿಟ್ಟು ಮೂರನೇ ದಿನ ಕುದಿಸಿ ಅದರಿಂದ ದಪ್ಪವಾದ ಜ್ಯೂಸ್ ತಯಾರಿಸಿ, ಅದಕ್ಕೆ ಸಕ್ಕರೆ ಬೆರೆಸುತ್ತಿದ್ದ. ಈ ದ್ರವ್ಯಕ್ಕೆ ಸೋಡಾ ಬೆರೆಸಿ ಮೇಲೆ ಸ್ವಲ್ಪ ನಿಂಬೆರಸ ಹಿಂಡಿ, "ತೆಗೆದುಕೊಳ್ಳಿ... ತಂಪಾಗಿರುತ್ತೆ... ಮೈಗೊಳ್ಳೆದಾಗುವುದು ಮಾರ್‍ರೆ..." ಎಂದು ಗ್ರಾಹಕರಿಗೆ ನಗುತ್ತಾ ಪ್ರೀತಿಯಿಂದ ಕೊಡುತ್ತಿದ್ದ. ನಿಜಕ್ಕೂ ಈ "ಪೆಂಡೆಂ ಸುಗಂಧ" ಬೇಸಿಗೆಯಲ್ಲಿ ತಂಪು, ಮಳೆಗಾಲದಲ್ಲಿ ಒಳ್ಳೆಯದು, ಚಳಿಗಾಲದಲ್ಲೂ ಖುಷಿಗೆ ಕುಡಿಯಬಹುದಾದಂತಹ ಪಾನೀಯವೇ ಸರಿ. ಜನಕ್ಕೂ ಬಹಳ ಮೆಚ್ಚುಗೆಯಾಯಿತು.

"ನಿಂಬೆಸೋಡಾ, ಸುಗಂಧ ಹಾಲು ಚಂದ್ರಣ್ಣನ ಅಂಗಡಿಯಲ್ಲೇ ಕುಡಿಬೇಕು ಮಾರ್‍ರೆ" ಅಂತ ಮಾತಾಡಿಕೊಳ್ತಿದ್ದರು.

"ನೋಡಿದೆಯಾ, ಒಂದಕ್ಕೆರಡು ತರಹ ತಂದ ಕೂಡಲೇ ವ್ಯಾಪಾರ ಹೆಚ್ಚಾಯಿತಲ್ಲವೇ. ನಮಗೆ ಎಷ್ಟು ಸಾಧ್ಯವೋ ಅಷ್ಟು ಬೇರೆ ಬೇರೆ ತರಹದ ಸೋಡಾಗಳನ್ನು ಮಾಡುವ" ಅಂತ ಹುರಿದುಂಬಿಸಿದಳು ಹೆಂಡತಿ.